ದಿನಾಂಕ **05.08.2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲು : 12** ರಿಂದ **15** ನೇ ಪ್ರತಿವಾದಿಗಳ ಪರ : ಶ್ರೀ ಜಿ ಎಂ ಬಿ ವಕೀಲರಿಂದ :

ಈಗ ನನಗೆ ತೋರಿಸಿದ ಪ್ರತಿವಾದ ಪತ್ರದಲ್ಲಿರುವ ಸಹಿಯು ನನ್ನ ತಾಯಿಯದು ಅಥವಾ ಅಲ್ಲವೊ ಎನ್ನುವ ಬಗ್ಗೆ ನನಗೆ ಹೇಳಲು ಬರುವುದಿಲ್ಲ. **12** ನೇ ಪ್ರತಿವಾದಿಯು ಭೋಜ ಪೂಜಾರಿಯವರ ಹೆಂಡತಿ. **12** ನೇ ಪ್ರತಿವಾದಿಯ ಸಹಿಯನ್ನು ನೋಡಿದರೆ ನನಗೆ ಗುರುತಿಸಲು ಬರುವುದಿಲ್ಲ. ನಾನು ಈ ದಿನ ಸೂಡಾದಿಂದ ನ್ಯಾಯಾಲಯಕ್ಕೆ ಒಬ್ಬನೇ ಬಂದಿರುತ್ತೇನೆ. ನನ್ನ ಬ್ಯಾಂಕಿನ ವ್ಯವಹಾರವನ್ನು ನಾನೇ ಸ್ವತಃ ಮಾಡುವುದಿಲ್ಲ. ನಾನು ನನ್ನ ವ್ಯವಹಾರಗಳನ್ನು ನಡೆಸಲು ಬೇರೆ ಯಾರಿಗೂ ಸಾಮಾನ್ಯ ಮುಖ್ತಾರು ನಾಮೆಯನ್ನು ನೀಡಿರುವುದಿಲ್ಲ. ಪ್ರತಿವಾದಿ **1**(ಎ) ರಿಂದ **1**(ಡಿ)ರವರುಗಳು ಕಲ್ಯಾ ಗ್ರಾಮದ ಖಾಯಂ ನಿವಾಸಿಗಳು. ಕಲ್ಯಾ ಗ್ರಾಮದಿಂದ ದಾವಾ ಆಸ್ತಿಗೆ ಎಷ್ಟು ದೂರವಿದೆ ಎಂದು ನನಗೆ ಗೊತ್ತಿಲ್ಲ. **4**(ಎ) ಮತ್ತು (ಬಿ) ಪ್ರತಿವಾದಿಗಳು ಶಿರ್ವ ಗ್ರಾಮದ ಖಾಯಂ ನಿವಾಸಿಗಳು. ಶಿರ್ವ ಗ್ರಾಮದಿಂದ ದಾವಾ ಆಸ್ತಿಗೆ ಸುಮಾರು **3** ಕಿ ಮೀ ಅಂತರವಿದೆ. ಚಂದಯ್ಯ ಪೂಜಾರಿಯವರು **1992** ರಲ್ಲಿ ದಾವಾ ಆಸ್ತಿಯ ಮನೆಯಲ್ಲಿ ಮೃತಪಟ್ಟಿರುತ್ತಾರೆ. ಸದ್ರಿಚಂದಯ್ಯ ಪೂಜಾರಿಯವರ ಮರಣ ಪ್ರಮಾಣಪತ್ರವನ್ನು ಹಾಜರುಪಡಿಸಲು ನಿಮಗೆ ಯಾವುದೇ ಅಭ್ಯಂತರವಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ಪಂಚಾಯತ್ ನಲ್ಲಿ ದೊರಕಿದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಚಂದಯ್ಯ ಪೂಜಾರಿಯವರು ದಾವಾರ ಅಸ್ತಿಯಲ್ಲಿ ಮೃತಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಚಂದಯ್ಯ ಪೂಜಾರಿಯವರು ದಾವಾ ಆಸ್ತಿಯಲ್ಲಿ ಮೃತಪಟ್ಟಿದ್ದರು ಎಂದು ತೋರಿಸಲು ಯಾವ ದಾಖಲೆ ಇದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನೋಡಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಈ ಹಿಂದೆ ಒಂದು ಮನೆ ಇದ್ದು ಪ್ರಸ್ತುತ **2** ಮನೆಗಳಿರುತ್ತವೆ. ದಾವಾ ಆಸ್ತಿಯಲ್ಲಿ ಈ ಹಿಂದೆ ಇದ್ದಂತಹ ಒಂದು ಮನೆಯನ್ನುನಾನು ಜನಿಸುವ ಪೂರ್ವದಲ್ಲಿ ಕಟ್ಟಿರುತ್ತಾರೆ.

ದಾವಾ ಆಸ್ತಿಯಲ್ಲಿನ ಇನ್ನೊಂದು ಮನೆಯನ್ನು **1992** ರ ನಂತರ ನಾನು ನಿರ್ಮಿಸಿರುತ್ತೇನೆ. ದಾವಾ ಆಸ್ತಿಯಲ್ಲಿರುವ ಹಳೆ ಮನೆಯಲ್ಲಿ ನನ್ನ ತಾಯಿ ವಾಸವಾಗಿರುತ್ತಾರೆ. ಸದ್ರಿ ಹಳೆ ಮನೆಯಲ್ಲಿ ನಾವು ಪೂಜಾರಿ, ಅಪ್ಪುಪೂಜಾರಿ, ಚಂದಯ್ಯಪೂಜಾರಿ ಮತ್ತು ಸಿದ್ದುಪೂಜಾರಿ ರವರುಗಳು ವಾಸವಾಗಿದ್ದರು ಎಂದು ತೋರಿಸಲು ಯಾವುದೇ ದಾಖಲೆಗಳು ಇಲ್ಲ. ಸದ್ರಿ ನಾವು ಪೂಜಾರಿ, ಅಪ್ಪುಪೂಜಾರಿ, ಚಂದಯ್ಯಪೂಜಾರಿ ಮತ್ತು ಸಿದ್ದುಪೂಜಾರಿ ರವರ ವಾರಸುದಾರರುಗಳು ದಾವಾ ಆಸ್ತಿಯ ಹಳೆ ಮನೆಯಲ್ಲಿ ವಾಾಸವಾಗಿದ್ದರು ಎಂದು ತೋರಿಸಲು ದಾಖಲೆಗಳು ಶಾಲೆಯಲ್ಲಿ ಇವೆ. ಸದ್ರಿ ಶಾಲೆಯು ಸೂಡಾದಲ್ಲಿ ಕಾಪಿಕಾಡ್ ಶಾಲೆಯಾಗಿರುತ್ತದೆ. ಸದ್ರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ಅಭ್ಯಂತರವಿಲ್ಲ.

ದಾವಾ ಆಸ್ತಿಯಲ್ಲಿನ ಇನ್ನೊಂದು ಮನೆಯಲ್ಲಿ ನಾವು ಪೂಜಾರಿ, ಅಪ್ಪುಪೂಜಾರಿ, ಚಂದಯ್ಯಪೂಜಾರಿ ಮತ್ತು ಸಿದ್ದುಪೂಜಾರಿ ರವರುಗಳು ವಾಸವಾಗಿದ್ದರು ಎಂದು ತೋರಿಸಲು ಯಾವುದೆ ದಾಖಲೆಗಳು ಇಲ್ಲ. ದಾವಾ ಆಸ್ತಿಯಲ್ಲಿನ ಇನ್ನೊಂದು ಮನೆಯನ್ನು ನಿರ್ಮಿಸುವ ಸಮಯದಲ್ಲಿ ಕೂಸು ಪೂಜಾರ್ತಿಯವರ ವಾರಸುದಾರರ ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಅ ರೀತಿ ಲಿಖಿತವಾಗಿ ಅನುಮತಿ ಪಡೆದುಕೊಂಡಿರುವುದಿಲ್ಲ. ನಾನು ದಾವಾ ಆಸ್ತಿಯಲ್ಲಿನ ಹೊಸ ಮನೆಯನ್ನು ಮೂಲ ದಾವೆ ಸಂಖ್ಯೆ **178/98** ಪ್ರಕರಣವು ತನಿಖೆಗೆ ಬಾಕಿ ಇದ್ದಾಗ ಬಲತ್ಕಾರವಾಗಿ ನಿರ್ಮಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈ ಹಿಂದೆ ಮೂಲ ದಾವೆ ಸಂಖ್ಯೆ **178/98** ರಲ್ಲಿ ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ಸದ್ರಿ ದಾವೆಯ ಡಿಕ್ರಿಯು ಸಂಪೂರ್ಣವಾಗಿ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಆ ರೀತಿ ಅಂತಿಮ ಅಮಲ್ದಾರಿ ಆದ ನಂತರ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ಅವರವರ ಹೆಸರುಗಳಿಗೆ ಬದಲಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿದ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ತಾಯಿ ಒಳ್ಳೆಯ ವಿಶ್ವಾಸದಲ್ಲಿದ್ದೇವೆ. **1998** ರಿಂದ ಇಲ್ಲಿಯವರೆಗೂ ಆ ರೀತಿ ಒಳ್ಳೆಯ ವಿಶ್ವಾಸದಲ್ಲಿದ್ದೇವೆ. ನಾನು **1998** ಇಸ್ವಿಯಲ್ಲಿ ಪಾಪ್ತನಾಗಿದ್ದೆ. ನಾನು ದಾವಾ ಅಸ್ತಿಯಲ್ಲಿ ಮನೆ

ಕಟ್ಟಿದ್ದೇನೆ ಎಂದು ಹೇಳುವ ಸಮಯದಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ವನಜ ಪೂಜಾರ್ತಿ, ಬೇಬಿ ಪೂಜಾರ್ತಿ, ಗೋಪು ಪೂಜಾರಿ ಮತ್ತು ಜಾನಕಿ ಪೂಜಾರ್ತಿ ರವರ ಹೆಸರಿನಲ್ಲಿದ್ದವು ಎಂದರೆ ಸರಿ. ಆ ರೀತಿ ವನಜಾ ಪೂಜಾರ್ತಿ ಮತ್ತು ಇತರರ ಹೆಸರಿನಲ್ಲಿ ದಾವಾ ಆಸ್ತಿಯ ಪಹಣಿ ಪತ್ರಿಕೆಗಳು ನಮೂದಾದ ದಿನದಿಂದ ಇಲ್ಲಿಯವರೆಗೂ ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ರವರ ಅಥವಾ ಅವರ ವಾರಸುದಾರರ ಹೆಸರನಲ್ಲಿ ದಾವಾ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಆ ರೀತಿ ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ರವರ ಅಥವಾ ಅವರ ವಾರಸುದಾರರ ಹೆಸರಿನಲ್ಲಿ ದಾವಾ ಅಸ್ತಿಯ ಪಹಣಿ ಪತ್ರಿಕೆಗಳು ನಮುದಾದ ಬಗ್ಗೆ ಯಾವುದಾದರೂ ದಾಖಲೆಗಳು ಇವೆಯಾ ಎನ್ನು ವಪ್ರಶ್ನೆಗೆ ಸಾಕ್ಷಿಯು ದಾಖಲೆಗಳನ್ನು ಈಗಾಗಲೇ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಹಾಜರುಪಡಿಸಿದ್ದೇನೆ ಎಂದು ಹೇಳುವ ದಾಖಲೆಗಳು ಯಾವುವು ಎಂದು ತೋರಿಸಲು ಬರುತ್ತದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿಯ ವಕೀಲರಿಗೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾವು ಪೂಜಾರಿಯವರಿಗೆ ಕಲ್ಯಾದಲ್ಲಿ ಸ್ವಂತ ಆಸ್ತಿ ಇದೆ ಎಂದರೆ ಸರಿಯಲ್ಲ. ಅಪ್ಪು ಪೂಜಾರಿ ಮತ್ತು ಚಂದಯ್ಯ ಪೂಜರಿಯವರಿಗೆ ಶಿರ್ವ ಗ್ರಾಮದಲ್ಲಿ ಸ್ವಂತ ಆಸ್ತಿಗಳು ಇದ್ದವು ಎಂದರೆ ಸರಿಯಲ್ಲ. ಸಿದ್ದು ಪೂಜಾರಿ ಯವರಿಗೆ ನಿಟ್ಟೆ ಗ್ರಾಮದಲ್ಲಿ ಸ್ವಂತ ಆಸ್ತಿಗಳು ಇದ್ದವು ಎಂದರೆ ಸರಿಯಲ್ಲ. **21** ರಿಂದ **30** ನೇ ಪ್ರತೀವಾದಿಗಳು ಮುಂಬೈನ ಖಾಯಂ ನಿವಾಸಿಗಳು ಎಂದರೆ ಸರಿ. ನಾನು ಈ ಮೇಲೆ ತಿಳಿಸಿದಂತೆ ದಾವಾ ಆಸ್ತಿಗಳು ಆಳಿಯ ಸಂತಾನ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ಭೂ ಸುಧಾರಣೆ ತಿದ್ದುಪಡಿ ಕಾಯ್ದೆ ಜಾರಿ ಬರುವ ಸಮಯದಲ್ಲಿ ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ರವರುಗಳು ಜೀವಂತ ಇದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಚಂದಯ್ಯ ಪೂಜಾರಿಯವರು ಮಾತ್ರ ಜೀವಂತವಿದ್ದರು ಎಂದು ನುಡಿಯುತ್ತಾರೆ. ನಾವು ಪೂಜಾರಿಯವರು ಯಾವಾ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ನಾನು ನಾವು ಪೂಜಾರಿಯವರನ್ನು ನೋಡಿರುತ್ತೇನೆ ಮತ್ತು ಅವರು ಮೃತಪಡುವಾಗ ನನಗೆ **10-11** ವರ್ಷ ಪ್ರಾಯವಾಗಿತ್ತು. ಅಪ್ಪು ಪೂಜಾರಿಯವರು ಯಾವಾ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಸಾಕ್ಷಿ ಮುಂದುವರಿದು ನಾವು

ಪೂಜಾರಿಯವರು ಮೃತಪಡುವ ಪೂರ್ವದಲ್ಲಿ ಅಪ್ಪು ಪೂಜಾರಿಯವರು ಮೃತಟಪ್ಪರುತ್ತಾರೆ ಎಂದು ನುಡಿಯುತ್ತಾರೆ. ಅಪ್ಪು ಪೂಜಾರಿಯವರು ಮೃತಪಡುವ ಸಮಯದಲ್ಲಿನನಗೆ ತಿಳುವಳಿಕೆ ಇತ್ತು. ಸಿದ್ದು ಪೂಜಾರಿಯವರು ಯಾವಾ ವರ್ಷದಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ. ಸದ್ರಿ ಸಿದ್ದು ಪೂಜಾರಿಯವರು ನಾವು ಮತ್ತು ಅಪ್ಪು ಪೂಜಾರಿಯವರು ಮೃತಪಟ್ಟ ನಂತರ ಮೃತಪಟ್ಟಿರುತ್ತಾರೆ. ಸದ್ರಿ ಸಿದ್ದು ಪೂಜರಿಯವರು ಮೃತಪಡುವಾಗ ನನಗೆ **15** ವರ್ಷ ಪ್ರಾಯವಾಗಿತ್ತು. ನಾನು ದಿ:**25.10.1962** ರಲ್ಲಿ ಜನಿಸಿರುತ್ತೇನೆ. ಭೂ ಸುಧಾರಣೆ ತಿದ್ದು ಪಡಿ ಕಾಯ್ದೆ ಜಾರಿ ಬಂದ ನಂತರ ಕೂಸು ಪೂಜಾರಿಯವರು ಮಾತ್ರ ಡಿಕ್ಲರೇಶನ್ ಅರ್ಜಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಭೂ ಸುಧಾರಣೆ ತಿದ್ದು ಪಡಿ ಕಾಯ್ದೆ ಜಾರಿ ಬರುವ ಸಮಯದಲ್ಲಿ ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ಪೂಜಾರಿ ರವರು ಜೀವಂತ ಇದ್ದರು ಎಂದರೆ ಸರಿಯಲ್ಲ. ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ಪೂಜಾರಿಯಾಗಲಿ ಅಥವಾ ಅವರ ವಾರಸುದಾರರುಗಳು ದಾವಾ ಸ್ಥಿರಾಸ್ತಿಕುರಿತು ಡಿಕ್ಲರೇಶನ್ ಅರ್ಜಿ ಸಲ್ಲಿಸಿರುವುದಿಲ್ಲ ಮತ್ತು ಭೂನ್ಯಾಯ ಮಂಡಳಿ ಪ್ರಕರಣದಲ್ಲಿ ಹಾಜರಾಗಿರುವುದಿಲ್ಲ ಹಾಗೂ ಭೂ ನ್ಯಾಯ ಮಂಡಳಿ ಮುಂದೆ ಯಾವುದೇ ಹೇಳಿಕ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ಪೂಜಾರಿಯವರ ವಾರಸುದಾರರುಗಳು ಭೂ ನ್ಯಾಯ ಮಂಡಳಿ ಮುಂದೆ ಹೇಳಿಕೆ ನೀಡಿದ ಕುರಿತು ದಾಖಲೆಗಳು ಇಲ್ಲ. ದಾವಾ ಅಸ್ತಿಗಳನ್ನು ಕೂಸು ಪೂಜಾರ್ತಿ ರವರು ತಮ್ಮ ಸ್ವಂತ ನೆಲೆಯಲ್ಲಿ ಪಡೆದುಕೊಂಡು ಡಿಕ್ಲರೇಶನ್ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಭೂ ನ್ಯಾಯ ಮಂಡಳಿಯಲ್ಲಿಆದಂತಹ ಡಿಕ್ಲರೇಶನ್ ತಿರ್ಮಾನವು ನನಗೆ **18** ವರ್ಷ ಪ್ರಾಯವಾದಗ ತಿಳಿದು ಬಂದಿರುತ್ತದೆ. ಸದ್ರಿ ಡಿಕ್ಲರೇಶನ್ ತಿರ್ಮಾನವನ್ನು ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ಪೂಜಾರಿಯವರ ವಾರಸುದಾರರಿಗೆ ತಿಳಿಸಿರುವುದಿಲ್ಲ. ಸದ್ರಿ ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ಪೂಜಾರಿಯವರ ವಾರಸುದಾರರುಗಳ ನಡುವೆ ಒಳ್ಳೆಯ ಸಂಪರ್ಕವಿತ್ತು. ನಾವು, ಅಪ್ಪು, ಚಂದಯ್ಯ ಮತ್ತು ಸಿದ್ದು ಪೂಜಾರಿ ಅಥವಾ ಅವರ ವಾರಸುದಾರರಾಗಲೀ ಭೂನ್ಯಾಯ ಮಂಡಳಿಯ ಡಿಕ್ಲರೇಶನ್ ತೀರ್ಮಾನವನ್ನು ಪ್ರಶ್ನಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಸದ್ರಿ ಡಿಕ್ಲರೇಶನ್ ತೀರ್ಮಾನವನ್ನು ಪಶ್ನಿಸಿರುವುದಿಲ್ಲ. ನಾನು ಈ ಮೇಲೆ ತಿಳಿಸಿದಂತೆ ದಾವಾ ಆಸ್ತಿಗಳು ವಿಭಾಗ

ವಾಗತಕ್ಕ ಆಸ್ತಿಗಳು ಅಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಾಗಲೇ **4** ಭಾಗವಾಗಿ ವಿಭಾಗವಾದ ವಿಚಾರ ನನಗೆ ಮತ್ತು ಇತರ ಪ್ರತಿವಾದಿಗಳಿಗೆ ತಿಳಿದಿದೆ ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆ **178/98** ರ ವಿಚಾರವನ್ನು ಪ್ರಸ್ತುತ ಪ್ರಕರಣದ ಸಮನ್ಸ್ ಜಾರಿ ಮುಖಾಂತರ ಇತರ ಪ್ರತಿವಾದಿಗಳಿಗೆ ತಿಳಿಸಿರುತ್ತೇನೆ. ನಾನು ಅಥವಾ ಇತರ ಪ್ರತಿವಾದಿಗಳು ಸದ್ರಿ ಮೂಲ ದಾವೆ ಸಂಖ್ಯೆ **178/98** ರಲ್ಲಿ ಪಕ್ಷಗಾರರಾಗಿ ಸೇರಿಕೊಳ್ಳಲು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ಪ್ರಸ್ತುತ ದಾವೆಯನ್ನು ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದ್ರಿ ಮೂಲ ದಾವೆ ಸಂಖ್ಯೆ **178/98** ರ ತೀರ್ಮಾನ ಮತ್ತು ಅಂತಿಮ ಅಮಲ್ಜಾರಿಯನ್ನು ಪ್ರಶ್ನಿಸಿರುವುದಿಲ್ಲ. ಸದ್ರಿ ಮೂಲ ದಾವೆ ಸಂಖ್ಯೆ **178/98** ರ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ದಾವಾ ಆಸ್ತಿಯನ್ನು ಸರ್ವೆ ಮಾಡಿಸುವ ಸಲುವಾಗಿ ಸರ್ವೆಯರು ಬಂದಿದ್ದುಆ ಕುರಿತು ಅರ್ಜಿ ಸಲ್ಲಿಸಬೇಕಾಗಿ ವಕೀಲರಿಗೆ ತಿಳಿಸಿರುತ್ತೇನೆ. ಪ್ರಸ್ತುತ ದಾವೆಯಲ್ಲಿ ಸದ್ರಿ ದಾವೆಯ ವಿಚಾರಗಳನ್ನು ಕಾಣಿಸದೆ ಇರಲು ಯಾವುದೇ ಸಕಾರಣಗಳು ಇರಲಿಲ್ಲ. ನಾನು ದುರುದ್ದೇಶ ಪೂರ್ವಕವಾಗಿ ಸದ್ರಿ ದಾವೆಯ ವಿಚಾರಗಳನ್ನು ಕಾಣಿಸದೆ ಪ್ರಸ್ತುತ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಕಾಣಿಸಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎ.ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ,
ಕಾರ್ಕಳ